# ✳ ಭಗವತಿಯ ಆರಾಧನೆ : ವಿವಿಧ ಆಯಾಮಗಳು ✳

ಪಿ. ಪುಷ್ಪಾ

ದಸರಾ ಎಂದಾಕ್ಷಣ ನಮಗೆ ನೆನಪಾಗುವುದು ನವರಾತ್ರಿಯ ಸಂದರ್ಭದಲ್ಲಿ ಆಚರಿಸಲ್ಪಡುವ ದುರ್ಗಾಪೂಜೆ ಹಾಗೂ ಅದರೊಂದಿಗಿನ ಸಾಂಸ್ಕೃತಿಕ ಕಾರ್ಯಕ್ರಮಗಳು. ಆಚರಣೆ ಕೆಲವೇ ದಿನಗಳಿಗೆ ಸೀಮಿತವಾಗಿದ್ದರೂ ಅದರ ಪ್ರಭಾವ ಅನೇಕ ರೀತಿಗಳಲ್ಲಿರುತ್ತದೆ ಎಂಬುವನ್ನು ತಿಳಿಸಿರುವ ಲೇಖಕಿ ಮೈಸೂರಿನ ನಿವಾಸಿ.

**ತಾತ್ವಿಕ ಹಿನ್ನೆಲೆ :**

ಭಾರತೀಯ ಪರಂಪರೆಯಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ದೇವರನ್ನು ತಾಯಿಯೆಂದು, ಭಗವತಿಯೆಂದು ಆರಾಧಿಸುವುದು ಒಂದು ವಿಶಿಷ್ಟ ಆಚರಣೆಯಾಗಿದೆ. ವೇದಗಳಲ್ಲಿನ ದೇವೀ ಸೂಕ್ತ, ಶ್ರೀಸೂಕ್ತ ಮತ್ತು ದುರ್ಗಾ ಸೂಕ್ತಗಳು ಹಿಂದಿನ ಕಾಲದಲ್ಲೂ ಇದ್ದ ದೇವೀಪೂಜಾ ಪ್ರಾಮಾಣ್ಯಕ್ಕೆ ಆಧಾರವಾಗಿವೆ. ಕೇನ, ತೈತ್ತಿರೀಯ, ಶ್ವೇತಾಶ್ವತರ ಉಪನಿಷತ್ತುಗಳಲ್ಲಿ ದೇವೀಪೂಜೆಯ ಪ್ರಸ್ತಾಪವಿದೆ. ದೇವಿಯೆಂದರೆ ಸಾಮಾನ್ಯ ಅರ್ಥದಲ್ಲಿ ಸ್ತ್ರೀದೇವತೆ; ಆದರೆ ವಿಶಿಷ್ಟ ಅರ್ಥದಲ್ಲಿ ಶಿವನ ಪತ್ನಿಯಾದ ಪಾರ್ವತಿ ಅಥವಾ ವಿಷ್ಣುವಿನ ಪತ್ನಿಯಾದ ಮಹಾಲಕ್ಷ್ಮಿ.

ಪರತತ್ತ್ವವಾಗಿರುವ ಆ ಪರಬ್ರಹ್ಮವನ್ನು ಅರ್ಥಮಾಡಿಕೊಳ್ಳುವುದು ಸಾಮಾನ್ಯ ಮಾನವನ ಬುದ್ಧಿಶಕ್ತಿಗೆ ಮೀರಿದ ವಿಷಯ. ಕೇವಲಜ್ಞಾನಮೂರ್ತಿಯೂ, ಪೂರ್ಣವೂ, ನಿರಾಕಾರವೂ ಆಗಿರುವ ಬ್ರಹ್ಮವನ್ನು ಉಪಾಸನೆ ಮಾಡಲು ಸಾಮಾನ್ಯ ಮಾನವನಿಗೆ ಸಾಧ್ಯವಿಲ್ಲವಾದ್ದರಿಂದ ಸಾಧಕನು ತನ್ನ ಸಾಧನೆಯ ಉದ್ದೇಶಗಳಿಗಾಗಿ 'ಸಾಕಾರ'ವನ್ನು ಕಲ್ಪಿಸಿಕೊಳ್ಳುತ್ತಾನೆ. ಈ ವ್ಯಕ್ತ ಜಗತ್ತು ಮತ್ತು ಇಲ್ಲಿನ ವ್ಯಾಪಾರಗಳೆಲ್ಲವೂ ಶಕ್ತಿಯ ವಿಲಾಸವೆಂದು ತಂತ್ರಗಳಲ್ಲಿ ತಿಳಿಸಲಾಗಿದೆ. ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳಲ್ಲಿ ನಿರತವಾಗಿರುವ ಪರಬ್ರಹ್ಮನ ಶಕ್ತಿರೂಪವನ್ನು 'ಬೆಂಕಿ ಹಾಗೂ ಅದರ ಸುಡುವಿಕೆಯನ್ನು ಹೇಗೆ ಬೇರ್ಪಡಿಸಲಾಗುವುದಿಲ್ಲವೋ ಹಾಗೆ' ಎಂದ ಶ್ರೀರಾಮಕೃಷ್ಣರು ಬ್ರಹ್ಮ ಮತ್ತು ಶಕ್ತಿಯ ಅಭೇದತ್ವವನ್ನು ತಿಳಿಸುತ್ತಾ "ನೀನು ಯಾರನ್ನು ಬ್ರಹ್ಮನೆಂದು ಕರೆಯುವೆಯೋ ಅದನ್ನು ನಾನು ಶಕ್ತಿ ಎಂದು ಕರೆಯುತ್ತೇನೆ" ಎನ್ನುತ್ತಾರೆ. ದೇವೀಭಾಗವತ ಮುಂತಾದ ಪುರಾಣಗಳಲ್ಲಿ ಶಕ್ತಿಯ ನಾನಾ ಸ್ವರೂಪಗಳ ಆರಾಧನೆಯನ್ನು ಕುರಿತು ಚರ್ಚಿಸಲಾಗಿದೆ. ಶಕ್ತಿ ಅಥವಾ ದೇವಿಯ ಪಾರಮ್ಯವನ್ನು ದೇವಿಯ ಬಾಯಿಂದಲೇ 'ಚಂಡಿ' ಅಥವಾ ಶ್ರೀದುರ್ಗಾಸಪ್ತಶತಿಯಲ್ಲಿ ಕಾಣಬಹುದು:

**ಏಕೈವಾಹಂ ಜಗತ್ಯತ್ರ ದ್ವಿತೀಯಾ ಕಾ ಮಮಾಪರಾ ।**
**ಪಶ್ಯೈತಾ ದುಷ್ಟ ಮಯ್ಯೇವ ವಿಶಂತ್ಯೋ ಮದ್ವಿಭೂತಯಃ ॥**
(೧೦.೪)

"ಈ ಜಗತ್ತಿನಲ್ಲಿರುವ ಸದ್ವಸ್ತು ನಾನೊಬ್ಬಳೇ. ನನಗೆ



ಬೇಲೂರು ಮಠದ ನಡೆಸುವ ದುರ್ಗಾಪೂಜೆಯ ಮೂರ್ತಿ

ಎರಡನೆಯದಾಗಿ ಯಾರಿದ್ದಾರೆ? ಎಲೈ ದುಷ್ಟನೇ, ನನ್ನ ಈ ಮಹಾಶಕ್ತಿಗಳೆಲ್ಲವೂ ನನ್ನಲ್ಲಿಯೇ ಪ್ರವೇಶಿಸುವುದನ್ನು ನೋಡು!"

ಪುರಾಣಗಳಲ್ಲಿ ಉಲ್ಲೇಖಗೊಂಡಿರುವಂತೆ ಹಿಮವಂತನ ಮಗಳು ದೇವಿ ಪಾರ್ವತಿಯು ತನ್ನ ತಂದೆಗೆ ಈ ರೀತಿ ತಿಳಿಸುತ್ತಾಳೆ: "ನಾನು ಅದೇ ಸರ್ವೋತ್ಕೃಷ್ಟವಾದ ಶಕ್ತಿಯಾಗಿದ್ದೇನೆ. ನಾನೇ ವಿಶ್ವಮಾತೆ. ಸೃಷ್ಟಿ, ಸ್ಥಿತಿ, ಲಯಗಳ ಕಾರಣಕರ್ತೆಯಾಗಿದ್ದೇನೆ." ರಾಜನಾದ ಸುರಥ ಮತ್ತು ವ್ಯಾಪಾರಿಯಾದ ಸಮಾಧಿ ಇವರಿಗೆ ಬೇರೆ ಬೇರೆ ವರಗಳಾದ ರಾಜ್ಯ ಮತ್ತು ಮುಕ್ತಿಯನ್ನು ನೀಡಿದ ಹಾಗೆ ಅವಳು ಪ್ರಾಪಂಚಿಕರಿಗೂ ಆಧ್ಯಾತ್ಮಿಕ ಪಿಪಾಸುಗಳಿಗೂ ಬೇಡಿದ್ದನ್ನು ಕರುಣಿಸುವ ತಾಯಿಯಾಗಿದ್ದಾಳೆ.

ಸಪ್ತಮಿಯಿಂದ ಆರಂಭಗೊಂಡು ವಿಜಯದಶಮಿಯವರೆಗೂ ನಡೆಯುವ ದುರ್ಗಾಪೂಜೆ ಉತ್ಸವ ಹಿಮವಂತನ ಮಗಳಾದ ಗೌರಿಯು ತನ್ನ ತೌರುಮನೆಗೆ ಬರುವ ಸಂದರ್ಭವಂತೆ. ವಿಶೇಷವಾಗಿ ಬಂಗಾಳದಲ್ಲಿ ದುರ್ಗಾಮಾತೆಯನ್ನು ಮಗಳಂತೆ ಆದರಿಸಿ, ಸತ್ಕರಿಸಿ, ಪೂಜಿಸಿ ಪಾವನರಾಗುತ್ತಾರೆ. ದೇವಿಯು ಎಲ್ಲರಿಗೂ ತಾಯಿಯಾಗಿರುವಂತೆ ಎಲ್ಲರ

ಮನೆಯ ಹೆಣ್ಣುಮಗಳೂ ಆಗಿದ್ದಾಳೆ. ವರ್ಷಕ್ಕೊಮ್ಮೆ ತನ್ನ ಪರಿವಾರದೊಡನೆ ತೌರುಮನೆಗೆ ಬರುವ ಮಗಳನ್ನು ಆದರಿಸಿ ಗೌರವಿಸಿ ಉಲ್ಲಾಸ ಸಂಭ್ರಮಗಳಿಂದ ಹಬ್ಬವನ್ನಾಚರಿಸುತ್ತಾರೆ. ಪ್ರೀತಿಯಿಂದ ಅವಳಿಗೆ ಯಾವುದೇ ಚಿಂತೆ ಬಾರದಂತೆ ಅವಳ ಮನಸ್ಸನ್ನು ಸಂತುಷ್ಟವಾಗಿರಿಸಲು ಪ್ರಯತ್ನಿಸುತ್ತಾರೆ. ಇಂತಹ ಒಂದು ಅತ್ಯಂತ ವಾತ್ಸಲ್ಯಪೂರಿತ ತೌರಿನ ಸಂಬಂಧವನ್ನು ದುರ್ಗಾಪೂಜೆಯ ಉತ್ಸವದೊಡನೆ ಬೆರೆಸಿ ಆ ಪೂಜೆ ಕೌಟುಂಬಿಕ ಬಾಂಧವ್ಯಗಳನ್ನು ಗಟ್ಟಿಗೊಳಿಸಿಕೊಳ್ಳುವ ಪರ್ವ ದಿನವೂ ಆಗಿರುತ್ತದೆ.

**ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆ :**

ವೈದಿಕ, ತಾತ್ವಿಕ, ಪೌರಾಣಿಕ ಹಿನ್ನೆಲೆಯುಳ್ಳ ಹಾಗೂ ದೈವೀ ಶಕ್ತಿಯ ವಿಜೃಂಭಣೆಯ ಸಂಕೇತವಾಗಿರುವ 'ದುರ್ಗಾ ಪೂಜೆ' ಒಂದು ಸಾಮಾಜಿಕ ಅಸ್ತಿತ್ವವನ್ನು ಪಡೆದಿದೆ. ಷಣ್ಮತ ಸ್ಥಾಪಕರಾದ ಆಚಾರ್ಯ ಶಂಕರರು ಶಕ್ತಿಪೂಜೆಗೆ ಪ್ರಾಧಾನ್ಯ ನೀಡಿ, ಮತಶ್ರದ್ಧೆಯು ಆಚರಣೆಯಲ್ಲಿ ವ್ಯಕ್ತಗೊಳ್ಳಬೇಕು, ತತ್ವಶಾಸ್ತ್ರದ ಸಿದ್ಧಾಂತಗಳು ದಿನನಿತ್ಯದ ಜೀವನದಲ್ಲಿ ಅನುಷ್ಠಾನಕ್ಕೆ ಬರುವಂತಾಗಬೇಕು ಎಂಬ ಉದ್ದೇಶದಿಂದ ವಿಗ್ರಹಾರಾಧನೆಗೆ ಪುಷ್ಟಿ ನೀಡುವಂತಹ ಪಂಚಾಯತನ ಪೂಜೆಯೊಂದಿಗೆ ದುರ್ಗಾ ಪೂಜೆಗೂ ಚಾಲನೆ ನೀಡಿರಬಹುದು ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಆದರೆ ಆಗ ದುರ್ಗಾಪೂಜೆಯನ್ನು ಹೇಗೆ ಆಚರಿಸುತ್ತಿದ್ದರೆಂಬುದು ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ.

ಸಾಮಾಜಿಕ ವ್ಯವಸ್ಥೆಯಲ್ಲಿ ಜನರನ್ನು ಒಂದುಗೂಡಿಸುವ, ಕೌಟುಂಬಿಕ ಬಾಂಧವ್ಯಗಳನ್ನು ಬೆಸೆಯುವ ಮತಶ್ರದ್ಧೆಯನ್ನು ಒಂದು ಮುಖ್ಯ ಭಾಗವೆಂದು ಪರಿಗಣಿಸಲಾಗಿದೆ. ಗಂಗಾ ನದಿಯ ಬಲದಂಡೆಯಲ್ಲಿ 'ಬ್ರಜೇಂದ್ರ ಭೂಮಿ' ಎಂಬಲ್ಲಿ ೧೨ನೆಯ ಶತಮಾನದಲ್ಲಿ 'ಉಮಾಪೂಜೆ' ಯನ್ನು ಸಂಗೀತ, ನೃತ್ಯಗಳಿಂದ ನಾಲ್ಕು ದಿನಗಳ ಕಾಲ ಆಚರಿಸುತ್ತಿದ್ದರು. ಅಂದಿನ ಸಾಹಿತ್ಯ ಕೃತಿಗಳ ಪ್ರಕಾರ ೧೫ನೆ ಶತಮಾನದವರೆಗೂ ಈ ಪೂಜೆಯ ಆಚರಣೆ ನಡೆಯುತ್ತಿತ್ತು ಎಂದು ಎನ್ನಲಾಗಿದೆ. ೧೬ನೆಯ ಶತಮಾನದ ಕೊನೆಯಲ್ಲಿ ಕಂಸನಾರಾಯಣ ಎಂಬ ಶಕ್ತಿವಂತನಾದ ರಾಜ ತನ್ನ ಐಶ್ವರ್ಯವನ್ನು ಮೆರೆಸಲು 'ಅಶ್ವಮೇಧ' ಯಾಗ ಮಾಡಲು ನಿಶ್ಚಯಿಸಿದನು. ಧರ್ಮಗ್ರಂಥಗಳ ಪ್ರಕಾರ ಈ ಯಾಗವನ್ನು ಕಲಿಯುಗದಲ್ಲಿ ಮಾಡಲು ಅವಕಾಶವಿಲ್ಲ ಎಂದು ಆ ರಾಜನ ಪುರೋಹಿತರು ತಿಳಿಸಿದರೆನ್ನಲಾಗಿದೆ. (ಆದರೆ ಇತಿಹಾಸದ ಗ್ರಂಥಗಳಲ್ಲಿ ಸಮುದ್ರಗುಪ್ತನು 'ಅಶ್ವಮೇಧ' ಯಾಗವನ್ನು ಮಾಡಿದನೆಂದು ಉಲ್ಲೇಖಗೊಂಡಿದೆ.) ಪುರೋಹಿತರ ಸಲಹೆಯಂತೆ ರಾಜ ಕಂಸನಾರಾಯಣನು ಅಲ್ಲಿನ ದೇಶಾಚಾರದ ಪ್ರಕಾರ 'ಅಶ್ವಮೇಧ'ಯಾಗದ ಬದಲು 'ದುರ್ಗಾಪೂಜೆ'ಯನ್ನು ವಿಜೃಂಭಣೆಯಿಂದ ಮಾಡಲು ಒಪ್ಪಿ ಅದರಂತೆ ವೈದಿಕ ಕ್ರಮದಲ್ಲಿ ಪೂಜೆಯನ್ನು ಮಾಡಿದನು. ಬಂಗಾಳದ ನದಿಯಾ ಪ್ರದೇಶದ ಭಾಮಾನಂದ ಮಜುಮ್‌ದಾರ್ ಎಂಬುವವರು ೧೬೦೬ರಲ್ಲಿ ಈ ಪೂಜೆಯನ್ನು ಪ್ರಾರಂಭಿಸಿದರು ಎಂದು ಇತಿಹಾಸ ಹೇಳುತ್ತದೆ.

೧೮ ಮತ್ತು ೧೯ನೆಯ ಶತಮಾನಗಳಲ್ಲಿ ಅನೇಕ ಜಮೀನ್ದಾರರು ಮತ್ತು ಚಿಕ್ಕ ಚಿಕ್ಕ ರಾಜರುಗಳು ತಮ್ಮ ಅಧಿಕಾರ, ಐಶ್ವರ್ಯಗಳನ್ನು ಪ್ರದರ್ಶಿಸಲು ದುರ್ಗಾಪೂಜೆಯನ್ನು ಆಚರಿಸುತ್ತಿದ್ದರು. ಆ ಸಮಯದಲ್ಲಿ ಎಲ್ಲಾ ಕಡೆಯೂ ಉತ್ಸವಗಳು ನಡೆಯುತ್ತಿದ್ದವು. ಅನಂತರ ಬ್ರಿಟಿಷರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಅವರ ವ್ಯಾಪಾರ ವಹಿವಾಟುಗಳಲ್ಲಿ ಪಾಲುದಾರರಾಗಿದ್ದ ಸಮಾಜದ ಕೆಲವು ಪ್ರತಿಷ್ಠಿತ ವ್ಯಕ್ತಿಗಳು ದುರ್ಗಾ ಪೂಜೆಯನ್ನು ಆಡಂಬರದಿಂದ ಆಚರಿಸಿ ಬಿಳಿಯರಿಗೆ ತಮ್ಮ ಪ್ರತಿಷ್ಠೆ, ಅಧಿಕಾರಗಳ ಪ್ರದರ್ಶನ ಮಾಡುತ್ತಿದ್ದರು. ಅಂತಹ ಪೂಜೆಗಳಲ್ಲಿ ಭಕ್ತಿಗಿಂತ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳನ್ನು ಹಾಗೂ ಅಧಿಕಾರಿಗಳನ್ನು ಸಂತೋಷಗೊಳಿಸುವುದೇ ಮುಖ್ಯವಾಗಿತ್ತು. ತನ್ನ ಅಧಿಕಾರಿಗಳು ಅಂತಹ ಸಮಾರಂಭಗಳಲ್ಲಿ ಭಾಗವಹಿಸಬಾರದೆಂದು ಬ್ರಿಟಿಷ್ ಸರ್ಕಾರವು ಆಜ್ಞೆ ಮಾಡಿತ್ತು. ಆದರೆ ಅದರಿಂದ ಈ ಪೂಜೆಯನ್ನು ಸಂಪೂರ್ಣವಾಗಿ ತಡೆಗಟ್ಟಲಾಗಲಿಲ್ಲ. ಜಾನ್ ಚಿಮನೆ ಎಂಬ ಆಂಗ್ಲ ವ್ಯಕ್ತಿ 'ವೀರ್ ಭೂಮ್'ನಲ್ಲಿ ತಾನೇ ಒಂದು ಪೂಜೆಯನ್ನು ಆಯೋಜಿಸಿದ್ದನು. ಆ ಕಾಲದಲ್ಲಿಯೇ ಪೂಜಾ ಸಮಯದಲ್ಲಿ ಬೊಂಬೆಯಾಟ, ಸಂಗೀತ, ನಗರ ಸಂಕೀರ್ತನೆ, ವೇಷಗಳ ಆಟ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ರಸ್ತೆಯುದ್ದಕ್ಕೂ ನಡೆಯುತ್ತಿದ್ದವು. ಹೊಸ ರೀತಿಯ ಮೋಜುಗಳು, ಅನೇಕ ದುಂದುವೆಚ್ಚದ ಕಾರ್ಯಕ್ರಮಗಳು ಮನರಂಜನೆಗಾಗಿ ನಡೆಯುತ್ತಿದ್ದವು. ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಜಹಗೀರುದಾರರ ಸಂಪತ್ತು ಕಡಿಮೆ ಆದ ಮೇಲೆ ಹಾಗೂ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾದಾಗ ದೊಡ್ಡದಾಗಿ ನಡೆಯುತ್ತಿದ್ದ ಪೂಜೆಗಳು ಕಡಿಮೆಯಾಗುತ್ತಾ ಬಂದವು. ಈ ಪೂಜಾಪದ್ಧತಿಯನ್ನು ಉಳಿಸಿಕೊಳ್ಳಲು ಸಾರ್ವಜನಿಕರು ಇದನ್ನು ಸಾಮೂಹಿಕವಾಗಿ ಕಲೆತು ಆಚರಿಸಲಾರಂಭಿಸಿದರು; ಮತ್ತೆ ಈ ಪೂಜೆ ಹೆಚ್ಚು ಪ್ರಾಮುಖ್ಯತೆ ಪಡೆಯಿತು. ಮೊದಲು ಹನ್ನೆರಡು ಜನ ಸ್ನೇಹಿತರು ಒಟ್ಟಾಗಿ ಸೇರಿ ಈ ಪೂಜೆಯನ್ನು ಆರಂಭಿಸಿದ್ದರಿಂದ ಇದನ್ನು 'ಬಾರೋಯಾರಿ' ಪೂಜೆ ಎಂದು ಕರೆಯಲಾಯಿತು. ಇತ್ತೀಚೆಗೆ ಸಾಮೂಹಿಕ ಪೂಜಾ ಕಾರ್ಯಕ್ರಮಗಳೇ ಹೆಚ್ಚಾಗಿ, ಮನೆಗಳಲ್ಲಿ ನಡೆಯುತ್ತಿದ್ದ ವೈಯಕ್ತಿಕ ಪೂಜೆಗಳು ಕಡಿಮೆಯಾಗಿವೆ.

**ಸಂಘಟನಾ ಶಕ್ತಿಯಾಗಿ ದುರ್ಗಾಪೂಜೆಯ ಉತ್ಸವ :**

ಲಕ್ಷ್ಮೀ, ಸರಸ್ವತಿ, ಗಣಪತಿ ಹಾಗೂ ಕಾರ್ತಿಕೇಯ— ದುರ್ಗಾಮಾತೆಯ ಪರಿವಾರದ ದೇವತೆಗಳೆಲ್ಲ ಅವಳ ಶಕ್ತಿಯ ಬೇರೆ ಬೇರೆ ರೂಪಗಳು. ಐಶ್ವರ್ಯದೇವತೆ ಲಕ್ಷ್ಮೀ, ವಿದ್ಯಾದೇವತೆ ಸರಸ್ವತಿ ಎಂಬ ಪ್ರತ್ಯೇಕ ಭಾವನೆಗಳಿದ್ದರೂ ಒಟ್ಟಿನಲ್ಲಿ ಎಲ್ಲರೂ ಒಂದೇ ಶಕ್ತಿಯ ಅಭಿವ್ಯಕ್ತಿ. ಆದ್ದರಿಂದ ಇವರನ್ನು ದುರ್ಗೆಯ ಅಂಶಗಳೆಂದೇ ಪೂಜಿಸುತ್ತಾರೆ. ಮಹಿಷಾಸುರನು ರಾಕ್ಷಸನಾದರೂ ಅವನಿಗೂ ಸಹ ದೇವಿಯ ಸೃಷ್ಟಿಯ ಕಾರ್ಯದಲ್ಲಿ ಜಾಗವಿದೆ. ಎಲ್ಲಾ ದೇವತೆಗಳೂ, ಚಿತ್ರಗಳೂ, ವಿಗ್ರಹಗಳೂ ತಾಯಿಯ ಮಹಿಮೆ, ವಾತ್ಸಲ್ಯ, ಕರುಣೆಗಳನ್ನೇ ತಿಳಿಸುತ್ತವೆ.

ಭಾರತ ದೇಶದ ವಿಭಿನ್ನ ಪ್ರಾಂತಗಳಲ್ಲಿ ತಮ್ಮದೇ ಅದ ವಿಶಿಷ್ಟ ನಂಬಿಕೆ ಶ್ರದ್ಧೆಗಳುಳ್ಳ ಅನೇಕ ಪಂಗಡಗಳಿವೆ. ಆದರೆ ದುರ್ಗಾಪೂಜೆಯಲ್ಲಿ ಇವೆಲ್ಲವನ್ನೂ ಒಂದುಗೂಡಿಸಲಾಗಿದೆ. ವೈದಿಕ, ಪೌರಾಣಿಕ, ತಾಂತ್ರಿಕ ದೇವತೆಗಳನ್ನು ದುರ್ಗಾ ಮಾತೆಯ ಜೊತೆಗೆ ಸೇರಿಸಿ ಪೂಜಿಸುತ್ತಾರೆ. ಬಂಗಾಳ ಮತ್ತು ತಮಿಳುನಾಡಿನಲ್ಲಿ ಕಾರ್ತಿಕೇಯನು ಪ್ರಸಿದ್ಧನಾಗಿದ್ದಾನೆ. ಒರಿಸ್ಸಾ, ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಗಣೇಶನು ಜನಪ್ರಿಯ ನಾಗಿದ್ದಾನೆ. ಸರಸ್ವತಿಯನ್ನು ಉತ್ತರ ಬಂಗಾಳ ಮತ್ತು ಉತ್ತರ ಭಾರತದಲ್ಲಿ ಹೆಚ್ಚು ಪೂಜಿಸುತ್ತಾರೆ. ಮೇಲೆ ಹೇಳಿದ ದೇವತೆ ಗಳಲ್ಲದೆ ಬ್ರಹ್ಮ, ವಿಷ್ಣು, ಶಿವ, ರಾಧಾಕೃಷ್ಣರನ್ನೂ ದುರ್ಗಾ ಪೂಜೆ ಸಂದರ್ಭದಲ್ಲಿ ಪೂಜಿಸುತ್ತಾರೆ. ಅದ್ದರಿಂದ ಎಲ್ಲಾ ರೀತಿ ರಿವಾಜುಗಳ ಜನರೂ ದುರ್ಗಾಪೂಜೆಯಲ್ಲಿ ಒಂದಾಗುತ್ತಾರೆ. ವೈಷ್ಣವ ಸಂಪ್ರದಾಯಸ್ಥರೂ ದುರ್ಗಾಮಾತೆಯನ್ನು ಪೂಜಿಸುತ್ತಾರೆ. ಆದರೆ ಅವರು ತಾಯಿಗೆ ಪ್ರಾಣಿಬಲಿಯನ್ನು ಕೊಡುವುದಿಲ್ಲ. ದುರ್ಗೆಯು ವಿಷ್ಣುವಿನ ತಂಗಿ ಹಾಗೂ ವಿಷ್ಣುವಿನ ಶಕ್ತಿಯನ್ನೂ ಆಕೆ ಪಡೆದಿದ್ದಾಳೆ ಎಂಬುದು ವೈಷ್ಣವರ ಅಭಿಪ್ರಾಯ.

ಭೌಗೋಳಿಕವಾಗಿ ಸಹ ದುರ್ಗಾಪೂಜೆಯಿಂದ ದೇಶವು ಒಂದಾಗಲು ಸಾಧ್ಯ. ಈ ಪೂಜೆಗಾಗಿ ಮಣ್ಣನ್ನು ಅರಮನೆ ಬಾಗಿಲು, ಹುತ್ತ, ಮತ್ತಿತರ ಕಡೆಗಳೇ ಅಲ್ಲದೆ ವೇಶ್ಯೆಯರ ಮನೆಯ ಬಾಗಿಲಿನಿಂದಲೂ ತರುವ ಸಂಪ್ರದಾಯವಿದೆ. ದೇವಿಯ ಮಹಾಸ್ನಾನ ಮಾಡಿಸಲು ಬೇರೆ ಬೇರೆ ಮೂಲ ಗಳಿಂದ ನೀರು ತರಬೇಕು. ಬಾವಿ, ಕೆರೆ, ಹೊಳೆ, ನದಿ ಸಮುದ್ರ ಮತ್ತು ಯಾತ್ರಾತೀರ್ಥಗಳಿಂದ ತರಬೇಕು. ಪೂಜಾಕಾರ್ಯಕ್ಕೆ ಬೇಕಾಗುವ ವಿವಿಧ ವಸ್ತುಗಳನ್ನೂ ಬೇರೆ ಬೇರೆ ಕಡೆಗಳಿಂದ ತರಬೇಕು. ದುರ್ಗಾಪೂಜೆಯನ್ನು ಶಾಸ್ತ್ರೋಕ್ತವಾಗಿ ಆಚರಿಸಲು ಬೇಕಾಗುವ ಪರಿಕರಗಳನ್ನು ಹೊಂದಿಸಿಕೊಳ್ಳುವುದೆಂದರೆ ಕಲಿಯುಗದಲ್ಲಿ 'ಅಶ್ವಮೇಧ ಯಾಗ' ಮಾಡುವಷ್ಟೇ ಕಷ್ಟ ವೆನ್ನುತ್ತಾರೆ. ಹಿಂದೆ ರಾಜರುಗಳು, ಜಮೀನ್ದಾರರು ಭೂಮಿ ಯನ್ನು ರೈತರಿಗೆ ಸಾಗುವಳಿಗೆ ಕೊಟ್ಟು ಅವರಿಂದ ಪೂಜೆ ಕಾಣಿಕೆಯನ್ನು ವಸೂಲಿ ಮಾಡುತ್ತಿದ್ದರು. ದೂರದೂರದ ಜಾಗಗಳಿಂದಲೂ ಪೂಜೆಗೆ ಸಹಾಯವನ್ನು ಪಡೆಯುತ್ತಿದ್ದರು. ಬ್ರಾಹ್ಮಣರ ನೇತೃತ್ವದಲ್ಲಿ ಪೂಜೆ ನಡೆಯುತ್ತಿತ್ತು. ಬಡಗಿಗಳು ದೇವರನ್ನು ಕೂರಿಸಲು ಬೇಕಾದ ಚೌಕಾಕಾರದ ಹಲಗೆಯ ಕಟ್ಟೆಗಳನ್ನು ನಿರ್ಮಿಸುತ್ತಿದ್ದರು. ಕುಂಬಾರರು ಕಲೆ ಮತ್ತು ಅಲಂಕಾರಗಳನ್ನು ಮಾಡುತ್ತಿದ್ದರು. ನಾಪಿತರು ಹೂವು, ಎಲೆ, ದರ್ಭೆ, ಗರಿಕೆ ಮುಂತಾದವುಗಳನ್ನು ಒದಗಿಸುತ್ತಿದ್ದರು. ಚಮ್ಮಾರರು ನಗಾರಿ ಬಾರಿಸುತ್ತಿದ್ದರು. ಸ್ಮಶಾನದಲ್ಲಿ ಕೆಲಸ ಮಾಡುವವರು ಬುಟ್ಟಿ ಮೊದಲಾದವುಗಳನ್ನು ಒದಗಿಸುತ್ತಿದ್ದರು. ಮುಸ್ಲಿಮರು ಬಲಿಪಶುಗಳನ್ನು ಒದಗಿಸುತ್ತಿದ್ದರು. ಕಬ್ಬಿಣದ ಕೆಲಸ ಮಾಡುವವರು ಬಲಿಪಶುಗಳನ್ನು ಪೂಜೆಯ ಸಮಯದಲ್ಲಿ ವಧೆ ಮಾಡುತ್ತಿದ್ದರು. ಬೆಸ್ತರು ಸಿಹಿತಿಂಡಿಗಳನ್ನು ತಯಾರಿಸುತ್ತಿದ್ದರು. ಎಲ್ಲರೂ ದುರ್ಗಾಪೂಜೆಯಲ್ಲಿ ಭಾಗ ವಹಿಸುತ್ತಿದ್ದರು. ದುರ್ಗಾಪೂಜೆಯು ನಡೆಯುತ್ತಿದ್ದ ಜಮೀನ್ದಾರರ ಮನೆಯಲ್ಲೇ ಎಲ್ಲರೂ ಪ್ರಸಾದ ಸ್ವೀಕರಿಸು ತ್ತಿದ್ದರು. ಈ ರೀತಿಯಾಗಿ ದುರ್ಗಾಪೂಜೆಯ ಸಮಯದಲ್ಲಿ ಭ್ರಾತೃತ್ವವನ್ನು ಕಾಣಬಹುದಾಗಿತ್ತು. ಸಮಾಜದಲ್ಲಿ ಐಕಮತ್ಯ ವನ್ನು ಸಾಧಿಸುವ ಒಂದು ವಿಶೇಷತೆ ಈ ಪೂಜೆಯ ಆಚರಣೆ ಯಲ್ಲಿದೆ.

ಹತ್ತನೆಯ ದಿನವಾದ ವಿಜಯದಶಮಿಯು ಪೂಜೆಯ ಮಂಗಳದ ದಿನ. ಅಂದು ದೇವಿಯನ್ನು ನೀರಿನಲ್ಲಿ ವಿಸರ್ಜಿಸು ತ್ತಾರೆ. ವಿಜಯದಶಮಿಯಂದು ರಾಮನು ರಾವಣನನ್ನು ಜಯಿಸಿದ ದಿನ. ಅಸೂಯೆ, ದ್ವೇಷ, ಹಗೆತನ ಎಂಬ ಪಶುತ್ವವನ್ನು ದೈವೀಶಕ್ತಿ ಸಂಹರಿಸಿ ವಿಜಯ ಸಾಧಿಸಿದ ದಿನ. ನಮ್ಮಲ್ಲಿರುವ ಈ ಪಶುತ್ವದ ದುರ್ಗುಣಗಳನ್ನು ಗೆಲ್ಲಲು ದುರ್ಗಾಮಾತೆಯ ಕೃಪೆ ಬೇಕು. ಈ ಅವಗುಣಗಳನ್ನು ಗೆದ್ದರೆ ಸಮಾಜದಲ್ಲಿ ಶಾಂತಿ ಮತ್ತು ಐಕ್ಯತೆ ನೆಲೆಸುತ್ತವೆ. ಆದ್ದರಿಂದ ಸರ್ವರ ಸುಖಕ್ಕಾಗಿ ನಾವು ದುರ್ಗಾಮಾತೆಯನ್ನು ಪ್ರಾರ್ಥಿಸಿ ಶುಭಾಶಯಗಳನ್ನು ಹಂಚಿಕೊಳ್ಳುವ ಕ್ರಮವಿದೆ. ನಮ್ಮ ದುರ್ಭಾವನೆಗಳನ್ನು ನೀರಿನಲ್ಲಿ ಮುಳುಗಿಸಬೇಕು. ವೈಮನಸ್ಯವ ನ್ನು ತೊರೆದು ಎಲ್ಲರನ್ನೂ ಮಿತ್ರರಂತೆ ಕಾಣಬೇಕು. ನಮ್ಮಲ್ಲಿ ಆಂತರಿಕ ಪರಿವರ್ತನೆಯಾಗಬೇಕು. ಹಿರಿಯರಿಗೆ ನಮಸ್ಕರಿಸು ವುದು, ಕಿರಿಯರನ್ನು ಆಶೀರ್ವದಿಸುವುದು, ಪೂಜೆಯ ಕೈಂಕರ್ಯದಲ್ಲಿ ತೊಡಗುವ ಮೂಲಕ ಮಾನವೀಯ ಸಂಬಂಧಗಳನ್ನು ಬೆಳೆಸಿಕೊಳ್ಳುವುದು ಇವೆಲ್ಲ ಸಾಮೂಹಿಕ ಪೂಜೆಯ ಪರಿಣಾಮಗಳು.

ನಿಜವಾಗಿ ದುರ್ಗಾಪೂಜೆಯು ಮೇಲು ಕೀಳೆನ್ನದೆ, ಸಮಾಜದ ಸರ್ವರನ್ನೂ ಒಂದುಗೂಡಿಸುವ ಹಬ್ಬದ ಆಚರಣೆಯಾಗಿದೆ. ದುರ್ಗಾಪೂಜೆಯ ಸಂದೇಶವೇ ಐಕಮತ್ಯ, ಎಲ್ಲರೊಡನೆ ಒಂದಾಗಿ ಬಾಳುವುದನ್ನು ಕಲಿಸುವುದು. ದುರ್ಗಾಪೂಜೆಯ ದಿನಗಳಲ್ಲಿ ಬಂಗಾಳದ ವಿವಿಧೆಡೆಗಳಲ್ಲಿ ನಡೆಯುವ ಪೂಜೆಗಳಲ್ಲಿ ಅದ್ಭುತವಾದ ಕಲಾಪ್ರದರ್ಶನವೇ ಏರ್ಪಡುತ್ತದೆ. ಸಾವಿರಾರು ಕುಟುಂಬಗಳು ವರ್ಷವಿಡೀ ದುಡಿದು ಈ ಸಮಯದಲ್ಲಿ ಜೀವನಕ್ಕೆ ಮಾರ್ಗ ಕಂಡುಕೊಳ್ಳುತ್ತಾರೆ. ನಮ್ಮ ದೇಶದ ಗ್ರಾಮೀಣ ಪ್ರದೇಶದ ಕಲೆಗಳು ವ್ಯಕ್ತಗೊಳ್ಳಲು ಅಪೂರ್ವ ಅವಕಾಶಗಳನ್ನು ಇವು ಕಲ್ಪಿಸುತ್ತವೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕವಾಗಿ ದುರ್ಗಾಪೂಜೆಯ ಉತ್ಸವವು ನಮ್ಮ ಬದುಕನ್ನು ವ್ಯಾಪಿಸಿಕೊಂಡು ವ್ಯಕ್ತಿಯ ಹಾಗೂ ಸಮಾಜದ ಹಿತಕ್ಕೆ ಸಹಕಾರಿಯಾಗಿದೆ.

## ದುರ್ಗಾಪೂಜೆಯಿಂದ ಒಗ್ಗೂಡಿದ ಬುಡಕಟ್ಟು ಜನಾಂಗ


ಶೆಲ್ಲಾ ನದಿ

ಮೇಘಾಲಯದ ಖಾಸಿ ಬೆಟ್ಟಗಳ ಸುಂದರ ಪರಿಸರದಲ್ಲಿರುವ ಶೆಲ್ಲಾ ಗ್ರಾಮದಲ್ಲಿ ದುರ್ಗಾಪೂಜೆಯನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುತ್ತದೆ. ಇಂತಹ ದುರ್ಗಮ ಪ್ರದೇಶದಲ್ಲಿ ಗುಡ್ಡಗಾಡು ಜನರ ಮಧ್ಯೆ ಈ ಸಾಂಪ್ರದಾಯಿಕ ಆಚರಣೆ ಹೇಗೆ ಪ್ರಾರಂಭವಾಯಿತು ಎಂಬುದು ಬಹಳ ಸ್ವಾರಸ್ಯಕರ. ಇಲ್ಲಿನ ಬುಡಕಟ್ಟು ಜನರು ವಿಶೇಷ ದಿನಗಳಂದು ಈಗಿನ ಬಾಂಗ್ಲಾದೇಶದಲ್ಲಿರುವ ಢಾಕಾ, ಸಿಲ್ಹೆಟ್ ಅಥವಾ ಭಾರತದ ಕೊಲ್ಕತಾ ನಗರಗಳಿಗೆ ಹೋಗುತ್ತಿದ್ದರು. ರಾಮನವಮಿ, ಕಾಳೀಪೂಜೆ, ದುರ್ಗಾಪೂಜೆ ಹಾಗೂ ಕೃಷ್ಣ ಜನ್ಮಾಷ್ಟಮಿಗಳಂದು ಉತ್ಸವಗಳಲ್ಲಿ ಭಾಗವಹಿಸುವ ಇಚ್ಛೆಯಿಂದ ಬಹಳ ದೂರ ಪ್ರಯಾಣಿಸುತ್ತಿದ್ದರು. ಆದರೆ ಅವರಿಗೆ ಅಲ್ಲಿನ ಹಿಂದೂಗಳು ವಸತಿ ಸೌಲಭ್ಯವನ್ನು ನೀಡಲು ಒಪ್ಪುತ್ತಿರಲಿಲ್ಲ! ಇದರಿಂದ ಮನನೊಂದು ಹಿಂದೂ ಸಂಪ್ರದಾಯದಿಂದ ಬೇರೆಯಾಗುವುದೇ ಲೇಸೆಂದು ಭಾವಿಸಿದ್ದ ಇವರನ್ನು ಪ್ರೀತಿ ಹಾಗೂ ಸೇವೆಯ ಮೂಲಕ ಒಗ್ಗೂಡಿಸಿದವರು ಕೇತಕಿ ಮಹಾರಾಜ್ ಎಂದೇ ಪ್ರಸಿದ್ಧರಾಗಿದ್ದ ಪೂಜ್ಯ ಸ್ವಾಮಿ ಪ್ರಭಾನಂದಜಿ. ಇವರ ಪ್ರಭಾವ ಹಾಗೂ ಮಾರ್ಗದರ್ಶನಗಳಿಂದ ೧೯೨೪ರಲ್ಲಿ ಇಲ್ಲಿ ಒಂದು ಪ್ರಾಥಮಿಕ ಶಾಲೆ ಪ್ರಾರಂಭವಾಗಿ ಕ್ರಮೇಣ ಚಿರಾಪುಂಜಿ ಮತ್ತು ಶಿಲ್ಲಾಂಗ್ ನಗರಗಳಲ್ಲೂ ಆಶ್ರಮಗಳು ಪ್ರಾರಂಭವಾದವು. ಸ್ವಾಮಿಜಿಯವರ ಪ್ರೇರಣೆ ಹಾಗೂ ಸಹಾಯದಿಂದ ನೂರಾರು ಜನ ಬೇಲೂರು ಮಠವನ್ನು ದರ್ಶಿಸಲು ಪ್ರತಿವರ್ಷವೂ ಬರುತ್ತಿದ್ದರು.


ಶೆಲ್ಲಾ ಆಶ್ರಮ

೧೯೩೧ರಿಂದ ಶೆಲ್ಲಾ ಗ್ರಾಮದಲ್ಲಿ ಸ್ವಾಮಿಗಳ ಪ್ರೋತ್ಸಾಹದೊಂದಿಗೆ ದುರ್ಗಾಪೂಜೆಯನ್ನು ಪ್ರಾರಂಭಿಸಲಾಯಿತು. ಇಂದಿಗೂ ನಡೆದುಕೊಂಡು ಬಂದಿರುವ ಈ ಆಚರಣೆ ಆ ಬುಡಕಟ್ಟು ಜನಾಂಗದ ಹೆಮ್ಮೆಯ ವಿಷಯವಾಗಿದೆ. ಗ್ರಾಮದ ಯುವಕರೇ ಮಣ್ಣಿನ ವಿಗ್ರಹವನ್ನು ತಯಾರಿಸಿ ಅದನ್ನು ವೇಷಭೂಷಣಗಳಿಂದ ಅಲಂಕರಿಸುತ್ತಾರೆ. ಮುಗ್ಧ ಮನಸ್ಸಿನ ಈ ಗ್ರಾಮಸ್ಥರು ಅತ್ಯಂತ ಶ್ರದ್ಧೆಯಿಂದ ಭಜನೆ, ಪೂಜೆಗಳಲ್ಲಿ ಪಾಲ್ಗೊಂಡು ವಿಜಯದಶಮಿಯಂದು ದೇವಿಯ ವಿಸರ್ಜನೆ ಮಾಡುವ ಸಮಯದಲ್ಲಿ ಕಣ್ಣೀರು ಸುರಿಸುತ್ತಾರೆ. ತಮ್ಮ ಸ್ವಂತ ಮಗಳನ್ನು ಬೀಳ್ಕೊಡುವಂತೆ ವಾತ್ಸಲ್ಯದಿಂದ ಗಲ್ಲವನ್ನು ಮುಟ್ಟಿ ಹಾರ ಹಾಕಿ ಅಲಂಕರಿಸಿ ಕಳಿಸಿಕೊಡುತ್ತಾರೆ. ಕ್ರೈಸ್ತ ಹಾಗೂ ಮುಸ್ಲಿಂ ಬಂಧುಗಳೂ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಇಲ್ಲಿನ ವಿಶೇಷ.


ದುರ್ಗಾ ಪ್ರತಿಮೆ


ದುರ್ಗಾ ಪೂಜೆಗೆ ನೆರೆದ ಜನಸ್ತೋಮ